ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಅನುದಾನ ಕುರಿತು

2865(3386): ಶ್ರೀ ಅಂಗಾರ ಎಸ್. (ಸೂಳ್ಯ) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಕೇಂದ್ರ ಸರ್ಕಾರದಿಂದ ಅನುದಾನ ಪಡೆಯಲು ಯಾವ ನಿಯಮ ಮತ್ತು ಷರತ್ತುಗಳನ್ನು ಹೊಂದಿರಬೇಕು; ಈ ಬಗ್ಗೆ ರಾಜ್ಯ ಸರ್ಕಾರ ಕೈಗೊಂಡ ಕಾರ್ಯಕ್ರಮಗಳೇನು?

ಡಾ: ಜಿ ಪರಮೇಶ್ವರ್ (ಉನ್ನತ ಶಿಕ್ಷಣ ಸಚಿವರು):

ಅ) ಕೇಂದ್ರ ಸರ್ಕಾರದ ಯು.ಜಿ.ಸಿ. ಯಿಂದ ಅನುದಾನ ಪಡೆಯಲು ನಿಯಮ 2(ಎಫ್) ಮತ್ತು 12(ಬಿ) ರನ್ವಯ ಅರ್ಹತೆಯನ್ನು ಪಡೆದಿರಬೇಕು. ಹಾಗೂ ಆಯಾ ವಿಶ್ವವಿದ್ಯಾಲಯಗಳಿಂದ ಶಾಶ್ವತ ಸಂಯೋಜನೆಯನ್ನು ಪಡೆದಿರಬೇಕು. ಅರ್ಹತೆ ಇರುವ ಎಲ್ಲಾ ಸರ್ಕಾರಿ ಕಾಲೇಜುಗಳು ವಿಶ್ವವಿದ್ಯಾಲಯಗಳಿಂದ ಶಾಶ್ವತ ಸಂಯೋಜನೆ ಪಡೆಯಲು ಕ್ರಮ ಕೈಗೊಳ್ಳುವಂತೆ ಪ್ರಾದೇಶಿಕ ಜಂಟಿ ನಿರ್ದೇಶಕರುಗಳಿಗೆ ಮತ್ತು ಪ್ರಾಂಶುಪಾಲರುಗಳಿಗೆ ಸುತ್ತೋಲೆಯ ಮೂಲಕ ತಿಳಿಸಲಾಗಿದೆ. ಇದಕ್ಕೆ ಪೂರಕವಾಗಿ ನ್ಯಾಕ್ ಸಂಸ್ಥೆಯ ಮಾನ್ಯತೆ ಆಯ್ದ ಕಾಲೇಜುಗಳ ಮೌಲ್ಯಮಾಪನ ವರದಿಗಳನ್ನು ತಯಾರಿಸಲಾಗಿದೆ. ಮತ್ತು ನ್ಯಾಕ್ ನಿಂದ ಕಾಲೇಜುಗಳ ಮೌಲ್ಯಮಾಪನ ಪ್ರಕ್ರಿಯೆ ಮುಂದುವರೆದಿರುತ್ತದೆ. ಕಾಲೇಜುಗಳ ಗುಣಮಟ್ಟ ಸುಧಾರಣೆಗಾಗಿ 18 ಜಿಲ್ಲೆಗಳಲ್ಲಿ ಟಿ.ಕ್ಯೂ.ಎಂ.ನ ಕಾರ್ಯಪಡೆಗಳನ್ನು ರಚಿಸಲಾಗಿದೆ. ಕಾರ್ಯಪಡೆಯ ಫೆಸಿಲಿಟೇಟರ್ಸ್‌ಗಳಿಗೆ ಹೆಚ್.ಆರ್.ಡಿ. ಮತ್ತು ಇತರೆ ಸಂಸ್ಥೆಗಳ ಮೂಲಕ ತರಬೇತಿಗಳನ್ನು ನೀಡಲಾಗುತ್ತಿದೆ.

ರಾಜ್ಯದ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಕಟ್ಟಡ ನಿರ್ಮಾಣಕ್ಕಾಗಿ ಅನುದಾನ ನೀಡುವ ಬಗ್ಗೆ

2866(3387): ಶ್ರೀ ಅಂಗಾರ ಎಸ್. (ಸೂಳ್ಯ) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಕಟ್ಟಡ ನಿರ್ಮಾಣಕ್ಕಾಗಿ ಕಳೆದ ಮೂರು ವರ್ಷಗಳಲ್ಲಿ ಎಷ್ಟೆಷ್ಟು ಅನುದಾನವನ್ನು ಯಾವ ಯಾವ ಯೋಜನೆಯಡಿಯಲ್ಲಿ ಯಾವ ಯಾವ ಕಾಲೇಜುಗಳಿಗೆ ಒದಗಿಸಲಾಗಿದೆ; ಪೂರ್ತಿ ವಿವರ ನೀಡುವುದು?

ಡಾ: ಜಿ ಪರಮೇಶ್ವರ್ (ಉನ್ನತ ಶಿಕ್ಷಣ ಸಚಿವರು):

ಅ) ರಾಜ್ಯದಲ್ಲಿ ಕಳೆದ 3 ವರ್ಷಗಳಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಕಟ್ಟಡ ನಿರ್ಮಾಣಕ್ಕಾಗಿ 2001–02ನೇ ಸಾಲಿನಿಂದ ಮುಂದುವರಿದ ಯೋಜನಾ ಕಾರ್ಯಕ್ರಮದ ಬಂಡವಾಳ ವೆಚ್ಚದಡಿಯಲ್ಲಿ ಮಾತ್ರ ಒದಗಿಸಿರುವ ಅನುದಾನದ ವಿವರಗಳು ಈ ಕೆಳಕಂಡಂತಿದೆ.

ವರ್ಷ	ಒದಗಿಸಿರುವ ಅನುದಾನ (ರೂ. ಲಕ್ಷಗಳಲ್ಲಿ)
2000–01	–
2001–02	ರೂ. 10.00
2002–03	ರೂ. 253.00

ಕಾಲೇಜುವಾರು ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

ಅನುಬಂಧ

2000-01 ರಿಂದ 2002-03ನೇ ಸಾಲುಗಳಿಗೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಕಟ್ಟಡ ನಿರ್ಮಾಣಕ್ಕಾಗಿ ಮುಂದುವರೆದ ಯೋಜನಾ ಕಾರ್ಯಕ್ರಮದ ಬಂಡವಾಳ ವೆಚ್ಚದಡಿಯಲ್ಲಿ ಬಿಡುಗಡೆ ಮಾಡಲಾಗಿರುವ ಅನುದಾನದ ವಿವರ

ಕ್ರಮ ಸಂಖ್ಯೆ	ಕಾಲೇಜಿನ ಹೆಸರು	ಬಿಡುಗಡೆ ಮಾಡಲಾಗಿರುವ ಮೊತ್ತ (ರೂ. ಲಕ್ಷಗಳಲ್ಲಿ)
1.	ಸಪ್ರದಕಾ, ಶಿರಾ	15.00
2.	ಸಪ್ರದಕಾ, ಕೋಲಾರ	1.27
3.	ಸಪ್ರದಕಾ, ಎನ್.ಆರ್. ಪುರಂ	3.00
4.	ಸಪ್ರದಕಾ, ಹೊಸನಗರ	4.50
5.	ಸಪ್ರದಕಾ, ಪಾವಗಡ	10.00
6.	ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು, ಬೆಂಗಳೂರು	10.00
7.	ಸಪ್ರದಕಾ, ಪಿರಿಯಾಪಟ್ಟಣ	5.00
8.	ಸಪ್ರದಕಾ, ಚಿಕ್ಕನಾಯ್ಕನಹಳ್ಳಿ	1.00
9.	ಸಪ್ರದಕಾ, ಶಿಡ್ಲಘಟ್ಟ	1.27
10.	ಮಹಾರಾಣಿ ಮಹಿಳಾ ಕಲಾ ಕಾಲೇಜು, ಬೆಂಗಳೂರು	1.80
11.	ಸಪ್ರದಕಾ, ಗುಬ್ಬಿ	3.55
12.	ಸಪ್ರದಕಾ, ಗಂಡಸಿ	10.00
13.	ಸಪ್ರದಕಾ, ಶಿಕಾರಿಪುರ	5.00
14.	ಸಪ್ರದಕಾ, ವಿಟ್ಲ	5.00
15.	ಸಪ್ರದಕಾ, ಸಾಗರ	10.00
16.	ಸಪ್ರದಕಾ, ಕಡೂರು	6.00
17.	ಮಹಾರಾಣಿ ಮಹಿಳಾ ಕಲಾ ಕಾಲೇಜು, ಮೈಸೂರು	2.00
18.	ಸಪ್ರದಕಾ, ಹೊಳೆನರಸಿಪುರ	10.00
19.	ಸರ್ಕಾರಿ ಕಲಾ ಕಾಲೇಜು, ಹಾಸನ	5.00
20.	ಸಪ್ರದಕಾ, ಮಾಗಡಿ	10.00
21.	ಸಪ್ರದಕಾ, ಹುಣಸೂರು	10.00
22.	ಸಪ್ರದಕಾ, ಜಾವಗಲ್	10.00
23.	ಸಪ್ರದಕಾ, ವಾಮನಪದವು	8.00
24.	ಸಪ್ರದಕಾ, ಅಫಜಲ್‌ಪುರ	30.00
25.	ಸಪ್ರದಕಾ, ಯಲ್ಲಾಪುರ	15.00
26.	ಸಪ್ರದಕಾ, ರೋಣ	15.00
27.	ಸಪ್ರದಕಾ, ಹನೂರು	22.36

1	2	3
28.	ಸಪ್ರದಕಾ, ಹೊಸದುರ್ಗ	20.00
29.	ಸಪ್ರದಕಾ, ಗಜೇಂದ್ರಗದ	1.00
30.	ಸಪ್ರದಕಾ, ಗಜೇಂದ್ರಗೆ 2001–02	1.50
31.	ಸಪ್ರದಕಾ, ನೇಸರ್ಗಿ 2001–02	5.00

ತೀರ್ಥಹಳ್ಳಿ ಶ್ರಿ ಜಯಚಾಮರಾಜೇಂದ್ರ ತಾಲ್ಲೂಕು ಆಸ್ಪತ್ರೆಯಲ್ಲಿ ಖಾಲಿ ಇರುವ ವೈದ್ಯರ ಹುದ್ದೆಗಳ ಭರ್ತಿ

2867(2822): ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತೀರ್ಥಹಳ್ಳಿ ಶ್ರೀ ಜಯಚಾಮರಾಜೇಂದ್ರ ತಾಲ್ಲೂಕು ಆಸ್ಪತ್ರೆಯಲ್ಲಿ 100 ಹಾಸಿಗೆಯ ಆಸ್ಪತ್ರೆಯನ್ನಾಗಿಸಿ KHSDPಯಲ್ಲಿ ಕಟ್ಟಡದ ಕೆಲಸ ಮುಗಿದಿದ್ದರೂ 100 ಹಾಸಿಗೆ ಆಸ್ಪತ್ರೆಗೆ ಇರಬೇಕಾದ ವೈದ್ಯರು ಹಾಗೂ ಸಿಬ್ಬಂದಿ ಸಂಖ್ಯೆಗೆ ಮಂಜೂರಾತಿ ಕೊಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈಗ ವೈದ್ಯರ ಎಷ್ಟು ಹುದ್ದೆಗಳು ಖಾಲಿ ಇವೆ; ಮತ್ತು ಇವುಗಳನ್ನು ಯಾವಾಗ ಭರ್ತಿ ಮಾಡಲಾಗುವುದು;

ಇ) ಇಲ್ಲಿಗೆ ವರ್ಗಾವಣೆ ಮಾಡಲಾಗಿದ್ದರೂ ಕೆಲಸಕ್ಕೆ ಹಾಜರಾಗದೇ ಸರ್ಕಾರಿ ಆದೇಶ ಧಿಕ್ಕರಿಸಿದ ವೈದ್ಯರ ಸಂಖ್ಯೆ ಎಷ್ಟು; ಮತ್ತು ಇವರ ಮೇಲೆ ಏನು ಕ್ರಮ ಕೈಗೊಳ್ಳಲಾಗಿದೆ;

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಬಂದಿದೆ.

ಆ) ಈಗ ಮೂರು ತಜ್ಞ ಹುದ್ದೆಗಳು ಖಾಲಿ ಇವೆ. ಇವುಗಳನ್ನು ಸ್ನಾತಕೋತ್ತರ ವ್ಯಾಸಂಗ ಮುಗಿಸಿ ಬರುವವರನ್ನು ನೇಮಿಸಲಾಗುವುದು.

ಇ) ವರ್ಗಾವಣೆ ಮೇಲೆ ನೇಮಿಸಿದ ವೈದ್ಯರು ಕರ್ತವ್ಯಕ್ಕೆ ಹಾಜರಾಗದಿದ್ದಲ್ಲಿ ಶಿಸ್ತುಕ್ರಮ ತೆಗೆದುಕೊಳ್ಳಲಾಗುವುದು. ಈ ಆಸ್ಪತ್ರೆಯ ಡಾ: ಎಂ. ಸುಲೋಚನಾ, ಸ್ತ್ರೀರೋಗ ತಜ್ಞರು ಮತ್ತು ಡಾ: ಶಿವಕುಮಾರ್, ಶಸ್ತ್ರ ಚಿಕಿತ್ಸಾ ತಜ್ಞರುಗಳನ್ನು ಕರ್ತವ್ಯ ನಿರ್ಲಕ್ಷತೆಯ ಮೇಲೆ ಅಮಾನತ್ತಿನಲ್ಲಿಡಲಾಗಿದೆ.

ಗ್ರಂಥಾಲಯದಲ್ಲಿ ಪುಸ್ತಕಗಳ ಖರೀದಿ ಬಗ್ಗೆ

2869 (2825) ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) ಮಾನ್ಯ ವಯಸ್ಕರ ಶಿಕ್ಷಣ, ಗ್ರಂಥಾಲಯ, ಮುದ್ರಣ ಮತ್ತು ಲೇಖನ ಸಾಮಗ್ರಿಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಆರ್.ಆರ್.ಎಲ್.ಎಫ್. ದ ವರ್ಯಾಚಿಂಗ್ ಗ್ರಾ್ಯಂಟ್ ಂಯೋಜನೆಯಡಿ ಆಯ್ದುಕೊಂಡಿರುವ ಪುಸ್ತಕಗಳು ಯಾವುವು; ಪುಸ್ತಕಗಳ ಸಂಖ್ಯೆ ಎಷ್ಟು (ವಿವರ ನೀಡುವುದು);

ಆ) ಈ ಪುಸ್ತಕಗಳ ಖರೀದಿಗೆ ಸರ್ಕಾರ ಅನುಸರಿಸುವ ಮಾನದಂಡಗಳೇನು;

ಇ) ಪುಸ್ತಕ ಖರೀದಿ ಪ್ರಕ್ರಿಯೆಯಲ್ಲಿ ಪುಸ್ತಕ ಆಯ್ಕೆ ಸಮಿತಿ ನಿರ್ದಿಷ್ಟ ಪುಸ್ತಕಗಳ ಖರೀದಿಗೆ ಶಿಫಾರಸ್ಸು ಮಾಡಲಾಗಿತ್ತೆ; ಹಾಗಿದ್ದರೆ, ಅಂತಹ ಪುಸ್ತಕಗಳು ಯಾವುವು;

ಈ) ಈ ಶಿಫಾರಸ್ಸಿನಂತೆ ಸರ್ಕಾರ ಪುಸ್ತಕಗಳನ್ನು ಖರೀದಿಸಿದೆಯೇ; ಹಾಗೂ ಪುಸ್ತಕ ಖರೀದಿ ಬೆಲೆ ಎಷ್ಟು;